ಅಪರ ಸಿವಿಲ್ ಜಡ್ಜ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಲಯ, ದೇವನಹಳ್ಳಿ

ಸಿ.ಸಿ ನಂಬರುಃ 2040/2025

ಪಿರ್ಯಾದಿ ಃ ಚನ್ನರಾಯಪಟ್ಟಣ ಪೋಲಿಸ್ ಠಾಣೆ

ವಿರುದ್ಧ

ಆರೋಪಿ ಃ1. ಚೇತನ್ ಕುಮಾರ್ ಬಿನ್ ರಾಜಣ್ಣ
ಆರೋಪಿ ಃ 2. ರಾಜಣ್ಣ ಬಿನ್ ಸಿದ್ದಪ್ಪ

ವಾಸಪ್ರಶಾಂತ ನಗರ ಚಿಕ್ಕಬಳ್ಳಾಪುರ,

ದೋಷಾರೋಪಣೆ

ಶ್ರೀಮತಿ.ಚಂದ್ರಿಕಾ ಕೆ.ಟಿ. ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ , ದೇವನಹಳ್ಳಿ ಅದ ನಾನು ಆರೋಪಿಯಾದ ನಿಮ್ಮ ವಿರುದ್ಧ ಈ ಕೆಳಕಂಡ ಆರೋಪಗಳಿಗೆ ಗುರಿಪಡಿಸಿದ್ದೇನೆ.

ಚನ್ನರಾಯಪಟ್ಟಣ ಪೋಲೀಸ್ ಠಾಣೆಯ ವ್ಯಾಪ್ತಿಯ ಚನ್ನಹಳ್ಳಿ ಗಾಮದ ಸರ್ವೆ ನಂ. 148 ರಲ್ಲಿರುವ ಮನೆಯ ಕಪೌಂಡ್ ಒಳಗೆ ದಿನಾಂಕ 31-05-2025 ರಂದು ಬೆಳಿಗ್ಗೆ 11.50 ಗಂಟೆ ಸಮಯದಲ್ಲಿ ಆರೋಪಿಗಳಾದ ನೀವು ಸಮಾನ ಉದೆಇದ್ದೇಶದಿಂದ ಅತಿಕ್ರಮ ಪ್ರವೇಶ ಮಾಡಿರುತ್ತೀರಿ. ಆ ಮೂಲಕ ಭಾ.ನ್ಯಾ ಸಂ. 329(3) ಸಕ ಕಲಂ 3(5) ರಡಿಯಲ್ಲಿ ಅಪರಾಧ ಮಾಡಿದ್ದೀರಾ ಎಂಬುದು ನನ್ನ ಸಂಜ್ಞೆಯಲ್ಲಿದೆ.

ಎರಡನೆಯದಾಗಿ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಸಾಕ್ಷಿ 1 ಮತ್ತು 2 ರವರೊಂದಿಗೆ ಗಲಾಟೆ ಮಾಡಿ ಕಪೌಂಡ್ ಗೋಡೆಸೆಯನ್ನು ಒಡೆದು ಹಾಕಿ ಅವರಿಗೆ ನಷ್ಟ ಉಂಟುಎಮಾಡಿರುತ್ತೀರಿ. ಆ ಮೂಲಕ ಭಾ.ನ್ಯಾ ಸಂ. 324 (2) ಸಹ ಕಲಂ 3(5)ರಡಿಯಲ್ಲಿ ಅಪರಾಧ ಮಾಡಿದ್ದೀರಾ ಎಂಬುದು ನನ್ನ ಸಂಜ್ಞೆಯಲ್ಲಿದೆ.

ಮೂರನೆಯದಾಗಿ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಸಮಾನಂ ಉದ್ದೇಶದಿಂದ ಸಾಕ್ಷಿ 1 ಮತ್ತ 2 ರವರನ್ನು ಉದ್ದೇಶಿಸಿ ಅವಾಚ್ಯ ಶಬ್ದಗಳಿಂದ ಬೈದು ಅವರ ಶಾಂತಿ ಭಂಗ ಮಾಡಲು ಉದ್ರೇಕಿಸುವಂತೆ ಅವಮಾನ ಮಾಡಿದ್ದು ಆ ಮೂಲಕ ಭಾ.ನ್ಯಾ ಸಂ. ಕಲಂಃ 352 ಸಹ ಕಲಂ 3(5)ರಡಿಯಲ್ಲಿ ಅಪರಾಧ ಮಾಡಿದ್ದೀರಾ ಎಂಬುದು ನನ್ನ ಸಂಜ್ಞೆಯಲ್ಲಿದೆ.

ನಾಲ್ಕನೆಯದಾಗಿ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಸಾಕ್ಷಿ 2 ರವರಿಗೆ ಕೈಯಿಂದ ಹೊಡೆದು ಅವರಿಗೆ ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತೀರಿ. ಆ ಮೂಲಕ ಭಾ.ನ್ಯಾ ಸಂ. 115(2) ಸಹ ಕಲಂ 3(5) ರಡಿಯಲ್ಲಿ ಅಪರಾಧ ಮಾಡಿದ್ದೀರಾ ಎಂಬುದು ನನ್ನ ಸಂಜ್ಞೆಯಲ್ಲಿದೆ.

ಕೊನೆಯದಾಗಿ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾಗದ ನೀವು ಸಮಾನ ಉದ್ದೇಶದಿಂದ ಸಾಕ್ಷಿ 1 ಮತ್ತು ಸಾಕ್ಷಿ 2 ರವರನ್ನು ನುದ್ದೆಶಿಸಿ ಜಾಗದ ತಂಟೆಗೆ ಬಂದರೆ ಜೀವ ಸಹಿತ ಉಳಿಸುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿರುತ್ತೀರಿ. ಆ ಮೂಲಕ ಭಾ.ನ್ಯಾ ಸಂ. 351(2) ಸಹ ಕಲಂ 3(5) ರಡಿಯಲ್ಲಿ ಅಪರಾಧ ಮಾಡಿದ್ದೀರಾ ಎಂಬುದು ನನ್ನ ಸಂಜ್ಞೆಯಲ್ಲಿದೆ.

ಈ ಮೇಲ್ಕಂಡ ಆರೋಪಗಳಿಗೆ ನೀವು ವಿಚಾರಣೆ ಎದುರಿ ಸಬೇಕೆಂದು ನಿರ್ದೇಶಿಸುತ್ತೇನೆ.

ಪ್ರಶ್ನೆ-1ಃ ಈಗ ನಿಮಗೆ ಓದಿ ವಿವರಿಸಿ ಹೇಳಿದ ಆರೋಪಗಳು ನಿಮಗೆ ಅರ್ಥವಾಗಿದೆಯೇ?

ಉತ್ತರ ಃ ಎ1ಃ
ಎ2ಃ

ಪ್ರಶ್ನೆ -2ಃ ನೀವು ಆರೋಪವನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆ ಯಾಗಬೇಕೆಂದು ಬಯಸುತ್ತೀರಾ?

ಉತ್ತರ ಃಎ1
ಎ2ಃ

ಈ ಮೇಲೆ ಹೇಳಿದ ಆರೋಪವನ್ನು ಆರೋಪಿಗೆ ಕನ್ನಡ/ತಿಳಿಯುವ ಭಾಷೆಯಲ್ಲಿ ಅವರಿಗೆ ಅರ್ಥವಾಗುವಂತೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬಹಿರಂಗ ನ್ಯಾಯಾಲಯದಲ್ಲಿ ದಾಖಲು ಮಾಡಿಕೊಂಡಿರುತ್ತೇನೆ.

ದಿನಾಂಕ 25 ನೇ ಮಾರ್ಚ್ 2026 ರಂದು

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ದೇವನಹಳ್ಳಿ